Udayavani pg 03

ಕೃಷಿ ವಿವಿಯನ್ನು ಸಮಗ್ರ ವಿವಿಯಾಗಿ ರೂಪಿಸಲು ಆಗ್ರಹ

ಬೆಂಗಳೂರು: ಪಾರಂಪರಿಕ ಇತಿಹಾಸ ಹೊಂದಿರುವ ಬೆಂಗಳೂರು ಕೃಷಿ ವಿಶ್ವವಿದ್ಯಾಲಯವನ್ನು ಸಮಗ್ರ ಕೃಷಿ ವಿಶ್ವವಿದ್ಯಾಲಯವಾಗಿ ಮಾರ್ಪಡಿಸಿ ಚಿತ್ರದುರ್ಗ ಜಿಲ್ಲೆಯನ್ನು ಇದರ ವ್ಯಾಪ್ತಿಗೆ ಸೇರ್ಪಡೆಗೊಳಿಸಬೇಕು ಎಂದು ವಿಶ್ವವಿದ್ಯಾಲಯ ವ್ಯವಸ್ಥಾಪನಾ ಮಂಡಳಿ ಸದಸ್ಯ ಡಾ.ಟಿ.ಕೆ.ಪ್ರಭಾಕರ ಶೆಟ್ಟಿ ಒತ್ತಾಯಿಸಿದರು. ಹೆಬ್ಬಾಳದ ಪಶು ವೈದ್ಯಕೀಯ ಕಾಲೇಜು ಆಲ್ಯುಮಿನಿ ಅಸೋಸಿಯೇಷನ್ ಸಭಾಂಗಣದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಬೆಂಗಳೂರು ಕೃಷಿ ವಿಶ್ವವಿದ್ಯಾಲಯವು ರಾಜ್ಯದಲ್ಲಿ ಕೃಷಿ ವಿಜ್ಞಾನ ವಿಶ್ವವಿದ್ಯಾನಿಲಯಗಳ ಅಧಿನಿಯಮ 1963ರ ಅನ್ವಯ ರೂಪುಗೊಂಡ ಪ್ರಥಮ ಕೃಷಿ ವಿಶ್ವವಿದ್ಯಾನಿಲಯ ವಾಗಿದ್ದು ಮಾತೃ ಸಂಸ್ಥೆಯಾಗಿದೆ. ಇದಾದ ಬಳಿಕ ಧಾರವಾಡ, ಬೀದರ್, ರಾಯಚೂರು, ಬಾಗಲಕೋಟೆ, ಶಿವಮೊಗ್ಗದಲ್ಲಿ ಕೃಷಿ ಹಾಗೂ ಕೃಷಿ ಸಂಬಂಧಿತ ವಿಶ್ವವಿದ್ಯಾನಿಲಯಗಳು ಆರಂಭವಾಗಿವೆ. ಈ ನಡುವೆ ಮಂಡ್ಯದಲ್ಲೂ ಸಮಗ್ರ ಕೃಷಿ ವಿವಿ ಆರಂಭಿಸಲು ರಾಜ್ಯ ಸರ್ಕಾರ ಸಚಿವ ಸಂಪುಟದಲ್ಲಿ ಅನುಮೋದನೆ ನೀಡಿದೆ. ಇದರಿಂದಾಗಿ ಬೆಂಗಳೂರು ಕೃಷಿ ವಿವಿಯ ಕಾರ್ಯವ್ಯಾಪ್ತಿ ಬೆಂಗಳೂರು ಹಾಗೂ ಚಿಂತಾಮಣಿಗೆ ಸೀಮಿತವಾಗಲಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು. ಗೋಷ್ಠಿಯಲ್ಲಿ ಹಳೇ ವಿದ್ಯಾರ್ಥಿಗಳ ಸಂಘದ ಅಧ್ಯಕ್ಷ ಡಾ.ಎಚ್.ಎಲ್.ಹರೀಶ್, ಬೆಂಗಳೂರು ಕೃಷಿ ವಿವಿ ಶಿಕ್ಷಕರ ಸಂಘದ ಅಧ್ಯಕ್ಷ ಡಾ.ಕೆ.ಎಸ್. ರಾಜಶೇಖರಪ್ಪ, ನೌಕರ ಸಂಘದ ಪ್ರಧಾನ ಕಾರ್ಯದರ್ಶಿ ಬಿ.ಶ್ರೀಕಾಂತ್ ಇತರರಿದ್ದರು.

Vijayavani pg 07

ವಿ ರೈತ ಮಿತ್ರ



ನಿಂಬೆ ಗಿಡದ ಎಲೆಗಳ ಮೇಲೆ ಬಿಳಿ ಚುಕ್ಕೆಗಳು ಕಂಡುಬಂದಿದ್ದು, ಇದಕ್ಕೆ ಕಾರಣ ಮತ್ತು ಪರಿಹಾರ ತಿಳಿಸಿ.

| ವೇಣುಗೋಪಾಲ್ ಬೆಂಗಳೂರು

ನಿಂಬೆ ಪ್ರಮುಖ ಆಮ್ಲಯುಕ್ತ ಹಣ್ಣಾಗಿದೆ. ನುಸಿ ಹಾವಳಿಯಿಂದಾಗಿ ನಿಂಬೆ ಗಿಡದ ಎಲೆಗಳ ಮೇಲೆ ಬಿಳಿ ಚುಕ್ಕೆಗಳು ಕಂಡುಬರುತ್ತವೆ. ನುಸಿಯು ಎಲೆ ಮತ್ತು ಕಾಯಿಗಳಿಂದ ರಸ ಹೀರುವುದರಿಂದ ಕಾಯಿಗಳು ಬಲಿಯುವ ಮೊದಲೇ ಪೇಲವಗೊಂಡು ಉದುರುತ್ತವೆ. ಇದರಿಂದಾಗಿ ಗಿಡದ ಬೆಳವಣಿಗೆ ಹಾಗೂ ಹಣ್ಣಿನ ಇಳುವರಿ ಗಮನಾರ್ಹವಾಗಿ ಕಡಿಮೆಯಾಗುತ್ತದೆ. ನುಸಿಗಳು ಬಲಿತ ಕಾಯಿಗಳಿಂದಲೂ ರಸಹೀರುವುದರಿಂದ ಕಾಯಿಗಳ ಮೇಲ್ಮೈ ಬೂದು ಬಣ್ಣಕ್ಕೆ ತಿರುಗಿ ಹಣ್ಣಾಗುವ ಸಂಭವ ಕಡಿಮೆಯಾಗುತ್ತದೆ. ಈ ನುಸಿಯು ಗಜನಿಂಬೆ, ಮೂಸಂಬಿ, ಚಕ್ಕೋತ, ಹೆಲ್ಲೆಕಾಯಿ ಮತ್ತು ಕಿತ್ತಳೆ ಬೆಳೆಯನ್ನೂ ಕಾಡುತ್ತವೆ.

ನಿರ್ವಹಣೆ: ಆಸರೆ ಸಸ್ಯಗಳು ಮತ್ತು ಇತರ ಕಳೆಗಳನ್ನು ತೆಗೆದು ನಾಶಪಡಿಸುವುದು, ನುಸಿಬಾಧೆಯ ನಿರೋಧಕ ಶಕ್ತಿಯುಳ್ಳ ತಳಿಗಳನ್ನು ಉಪಯೋಗಿಸುವುದು. ನಂತರ ಅವಶ್ಯವಿದ್ದಲ್ಲಿ ಪ್ರತಿ ಲೀಟರ್ ನೀರಿಗೆ ಪ್ರೊಪಾರ್ಗೈಟ್ 57 ಇ.ಸಿ. 2.0 ಮಿ.ಲೀ. ಅಥವಾ ನೀರಿನಲ್ಲಿ ಕರಗುವ ಗಂಧಕ 80 ಡಬ್ಲ್ಯು.ಪಿ. 3.0 ಗ್ರಾಂ ನಂತೆ ಬೆರೆಸಿ ಸಿಂಪಡಿಸುವುದು.

| ಡಾ. ಕೆ.ಪಲ್ಲವಿ ಸಸ್ಯ ಸಂರಕ್ಷಣಾ ತಜ್ಞರು

ರೈತರ ಸಮಸ್ಯೆಗಳಿಗೆ ಕೃಷಿ ತಂತ್ರಜ್ಞಾನ ಮಾಹಿತಿ ಕೇಂದ್ರ, ವಿಸ್ತರಣಾ ನಿರ್ದೇಶನಾಲಯ, ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು. ಇಲ್ಲಿನ ತಜ್ಞರು ಉತ್ತರಿಸಲಿದ್ದಾರೆ. ನಿಮ್ಮ ಪ್ರಶ್ನೆಗಳನ್ನು 18004250571/ 080-23627889 ಸಂಖ್ಯೆಗೆ ಕರೆ ಮಾಡಿ ತಿಳಿಸಿ ಅಥವಾ 94824 77812 ಸಂಖ್ಯೆಗೆ ವಾಟ್ಸ್‌ಆ್ಯಪ್ ಮಾಡಿ

V-karnataka pg 05

1.84 ಲಕ್ಷ ಮೆಣಸಿನ ಚೀಲ ಆವಕ

■ **ವಿಕ ಸುದ್ದಿಲೋಕ** ಬ್ಯಾಡಗಿ

ಸ್ಥಳೀಯ ಕೃಷಿ ಉತ್ಪನ್ನ ಮಾರುಕಟ್ಟೆಗೆ ಸೋಮವಾರ (ಫೆ.03) 1.84 ಲಕ್ಷ ಆವಕ ಮೆಣಸಿನಕಾಯಿ ಚೀಲಗಳು ಆವಕ ವಾಗಿವೆ.

ಕೆಲ ತಿಂಗಳಿನಿಂದ ಮೆಣಸಿನಕಾಯಿ ಕೊರತೆ ಎದುರಿಸುತ್ತಿದ್ದ ಬ್ಯಾಡಗಿ ಮಾರುಕಟ್ಟೆಯಲ್ಲಿ ಕಳೆದ ಜನವರಿಯಿಂದ ಆವಕ ಹೆಚ್ಚಳವಾಗಿ ಜೀವಕಳೆ ಬಂದಿದೆ. ನಿರಂತರವಾಗಿ ಲಕ್ಷಾಂತರ ಚೀಲಗಳು ಹರಿದುಬರುತ್ತಿರುವ ಕಾರಣ ವ್ಯಾಪಾರಸ್ಥರ ಮುಖದಲ್ಲಿ ಮಂದಹಾಸಕ್ಕೆ ಕಾರಣ ವಾಗುತ್ತಿದೆ.

ಕಳೆದ ಸೋಮವಾರ 1.29 ಲಕ್ಷ ಮೆಣಸಿನಕಾಯಿ ಚೀಲಗಳ ಆವಕ, ಕಳೆದ ಗುರುವಾರ 1.30 ಲಕ್ಷ ಮೆಣಸಿನಕಾಯಿ ಚೀಲಗಳು ಆವಕವಾಗಿವೆ.

ಈ ಸೋಮವಾರ ಕೂಡ 1.84 ಲಕ್ಷ ಮೆಣಸಿನಕಾಯಿ ಚೀಲಗಳು ಹರಿದು ಬಂದಿದ್ದು ಮಾರುಕಟ್ಟೆ ಮೆಣಸಿನಕಾಯಿಂದ ಭರ್ತಿ ಆಗಿದೆ.

ಫೆಬ್ರವರಿ ಮೊದಲ ವಾರದಲ್ಲಿ ಆವಕದ ಗಡಿ ಒಂದುವರೆ ಲಕ್ಷ ದಾಟಿದೆ.



ಮಾರುಕಟ್ಟೆದರ

ತಳಿ	ಕನಿಷ್ಠ	ಗರಿಷ್ಠ	ಸರಾಸರಿ
ಕಡ್ಡಿ	2,809	33,009	28,209
ಡಬ್ಬಿ	3,169	35,559	29,659
ಗುಂಟೂರು	1,029	16,409	14,209

V-karnataka pg 04

ಮಹದೇಶ್ವರ ಬೆಟ್ಟ ವನ್ಯಧಾಮದಲ್ಲಿ ಪಕ್ಷಿ ಸಮೀಕ್ಷೆ | 253 ಬಗೆಯ ಹಕ್ಕಿಗಳು ಪತ್ತೆ

ಹೆಜ್ಜೆ ಮೂಡದ ಹಾದಿಯಲ್ಲಿ ಬಾನಾಡಿಗಳ ರುಜು

■ **ವಿಕ ಸುದ್ದಿಲೋಕ** ಚಾಮರಾಜನಗರ

ಜಿಲ್ಲೆಯ ಮಲೆ ಮಹದೇಶ್ವರ ಬೆಟ್ಟ ವನ್ಯಧಾಮದಲ್ಲಿ ಇದೇ ಮೊದಲ ಬಾರಿಗೆ ನಡೆದ ಪಕ್ಷಿ ಸಮೀಕ್ಷೆಯಲ್ಲಿ ಅಪರೂಪದ ಪಕ್ಷಿಗಳು ಗೋಚರಿಸಿದ್ದು, ಹೆಜ್ಜೆ ಮೂಡದ ಹಾದಿಯಲ್ಲಿ ಹೊಸ ಪಕ್ಷಿಗಳ ವಿಹಾರವನ್ನು ಕಂಡು ಪಕ್ಷಿ ಪ್ರಿಯರು ಸಂತಸಗೊಂಡಿದ್ದಾರೆ.

ಸಮೀಕ್ಷೆಯಲ್ಲಿ ಒಟ್ಟು 253 ಬಗೆಯ ಪಕ್ಷಿಗಳನ್ನು ಗುರುತಿಸಲಾಗಿದೆ. ಈ ಪೈಕಿ ವೈಟ್‌ನೇಪ್ಡ್ ಟಿಪ್, ವೈಟ್ ರಂಪ್ಡ್ ರಣಹದ್ದು, ನೀಲಗಿರಿ ಮರದ ಪಾರಿವಾಳ ಹಾಗೂ ಕ್ರೆಸ್ಟೆಡ್ ಸರ್ಪ ಹದ್ದು ಈ ಅರಣ್ಯದಲ್ಲಿ ಮೊದಲ ಬಾರಿಗೆ ಗೋಚರಿಸಿವೆ.



"120 ಮಂದಿ ಪಕ್ಷಿ ವೀಕ್ಷಕರು, ಅರಣ್ಯ ಇಲಾಖೆ ಸಿಬ್ಬಂದಿ ಮುಂದಾಳತ್ವದಲ್ಲಿ ಈ ಸಮೀಕ್ಷೆಯನ್ನು ನಡೆಸಿದರು. ಪ್ರತಿಗುಂಪಿಗೆ ಒಂದು ಟ್ರಾ್ಯಕ್‌ನಂತೆ ಒಟ್ಟು 40 ಟ್ರಾ್ಯಕ್‌ಗಳಲ್ಲಿ ಸಮೀಕ್ಷೆ ನಡೆದಿದೆ. ಪ್ರತಿ ಟ್ರಾ್ಯಕ್‌ನಲ್ಲೂ ಮೂರ್ನಾಲ್ಕು ಮಂದಿ 3ರಿಂದ 4 ಕಿ.ಮೀ. ವಿಹರಿಸಿ, ಪಕ್ಷಿಗಳನ್ನು ಗುರುತಿಸಿದ್ದಾರೆ," ಎಂದು ಮಲೆ ಮಹದೇಶ್ವರ ಬೆಟ್ಟ ವನ್ಯಧಾಮದ ಉಪ ಅರಣ್ಯ ಸಂರಕ್ಷಣಾಧಿಕಾರಿ ಡಾ. ಸಂತೋಷ್‌ಕುಮಾರ್ ತಿಳಿಸಿದ್ದಾರೆ.

"ಪಕ್ಷಿ ಸಮೀಕ್ಷೆಯನ್ನು ಕಾಲಕಾಲಕ್ಕೆ ನಡೆಸುವುದು ಕಡ್ಡಾಯವಾಗಬೇಕು. ಆಳಿವಿನ ಅಂಚಿನಲ್ಲಿರುವ ಪಕ್ಷಿಗಳ ಉಳಿವಿಗೆ ಆಗಬೇಕಿರುವ ಕ್ರಮಗಳ ಬಗ್ಗೆ ಕ್ರಮ ವಹಿಸಬೇಕು. ಹೊಸದಾಗಿ ಬಂದಿರುವ ಪ್ರಬೇಧಗಳನ್ನು ಅಲ್ಲೇ ಉಳಿಸಿಕೊಳ್ಳಲು ಬೇಕಿರುವ ಕ್ರಮಗಳ ಬಗ್ಗೆ ಅಧ್ಯಯನ ನಡೆಸಿಕೊಳ್ಳಲು ಸಹ ಇಂಥ ಸಮೀಕ್ಷೆಗಳು ಅನುಕೂಲಕರ," ಎನ್ನುತ್ತಾರೆ ವನ್ಯಜೀವಿ ತಜ್ಞ ಮಂಜುನಾಥ್ ಎಸ್.ನಾಯಕ್.

For more information visit
University Library Website
Web - uasbagrilibindia.org
E-mail- librarian@uasbangalore.edu.in

Coffee growers beam as prices brew strong

Yashaswini.sri
@timesofindia.com

Getty Images



Bengaluru: Coffee growers in Karnataka are relishing a rich and rewarding season, with prices steaming to new heights for the second consecutive year. The country's largest coffee-producing state is experiencing an unprecedented surge in prices, fuelled by a global supply crunch and escalating international demand.

In the rolling plantations of Kodagu, Chikkamagaluru, and parts of Hassan, the final phase of picking has only deepened joy of planters. Climate change and erratic weather have roasted *global output, resulting in supply shortages from* major coffee-producing countries like Brazil and Vietnam. It has created the perfect blend for Karnataka's planters.

Nanda Belliappa, chairman, Coorg Planters' Association, said Brazil, which accounts for 60% of global coffee production, has been particularly affected.

"Over the past month, prices have scaled huge heights. For instance, a 50kg bag of arabica, which was priced at Rs 19,000 last month, now costs Rs 24,000. The price of robusta, which we sell as a filler to compensate for the demand for arabica, has doubled — from Rs 10,000 per bag to Rs 20,000."

Belliappa suggested that market prices could be on the brink of breaking historical records, but said profits have been tempered with rising input costs as well. "The last time coffee prices reached record highs was in 1977. If this trend continues, we might surpass those levels," he said.

MJ Dinesh, chairman, Coffee Board of India, said prices have risen 30% on average from last year, but the rise is even more spectacular compared to 2023. "An imbalance between supply and consumption is driving the rapid rise in coffee prices," he said.

Scarcity of arabica in Karnataka has further intensified demand. A Arvind Rao, chairman, Karnataka Planters' Association, said, "Ripple effects of global supply shortages are being felt in Karnataka. Prices may continue to rise for a few months, but once they stabilise, they are unlikely to see another sharp increase for a long time."

Farmers on the ground are witnessing the impact first-hand. Bhaskar B, a coffee farmer from Chikkamagaluru, said: "Over the past few months, the prices have increased drastically. While we do expect higher profits, it might be tempered since the cost of cultivation — including labour, fertiliser and equipment — has also shot up. I don't see prices stabilising for a while."

COCOA PRICE SOARS OVER 70%

Like coffee, prices of cocoa, a key ingredient in the chocolate industry, has also surged an average of 70% in just one season, with farmers attributing the steep rise to global supply shortages and soaring demand. India's cocoa is gaining popularity in both domestic and international markets, further driving up prices. BV Sathyanarayana, managing director, Campco, said, "Cocoa prices, which had hit a low of Rs 440 per kg, have shot up to Rs 770 per kg."

Mangaluru-based cocoa farmer Mayur M said a growing preference for Indian-grown cocoa is also driving up prices. "Countries like Africa, among the world's largest cocoa producers, are facing a supply shortage due to excessive rains ruining the crop before harvest," he told **TOI**.

ಬರೋಬ್ಬರಿ ₹1.48 ಲಕ್ಷಕ್ಕೆ ಬಂಡೂರು ತಳಿ ಟಗರು ಮಾರಾಟ; ಹೊಸ ದಾಖಲೆ

Kannadaprabha-Mandya.Edi Pg 04

ಬಹು ಬೇಡಿಕೆ ಇರುವ ಬಂಡೂರು ತಳಿಯ 8 ತಿಂಗಳ ಟಗರು | ಶಿವಮೊಗ್ಗ ಮೂಲದ ಉದ್ಯಮಿಯಿಂದ ಖರೀದಿ

• **ಕನ್ನಡಪ್ರಭ ವಾರ್ತೆ** ಮಳವಳ್ಳಿ

ಬಹು ಬೇಡಿಕೆ ಇರುವ ಬಂಡೂರು ತಳಿಯ 8 ತಿಂಗಳ ಟಗರು ಬರೋಬ್ಬರಿ 1.48 ಲಕ್ಷ ರು.ಗೆ ಮಾರಾಟ ವಾಗುವ ಮೂಲಕ ದಾಖಲೆ ನಿರ್ಮಿಸಿದೆ.

ತಾಲೂಕಿನ ಕಿರುಗಾವಲು ಗ್ರಾಮದ ಮನೋಹರ್ (ಮನು) ಎಂಬುವವರ ಪುತ್ರ ಯುವ ರೈತ ಉಲ್ಲಾಸ್ ಗೌಡ ಕೆಲ ತಿಂಗಳ ಹಿಂದೆ ತಮ್ಮ ಮನೆಯಲ್ಲಿಯೇ ಹುಟ್ಟಿದ್ದ ಈ ಟಗರನ್ನು ಟಿ.ನರಸೀಪುರಕ್ಕೆ 20 ಸಾವಿರ ರು. ಮಾರಾಟ ಮಾಡಿದ್ದರು. ನಂತರ ಕೆಲ ದಿನಗಳ ಲ್ಲಿಯೇ ತಾವೇ 50 ಸಾವಿರ ಕೊಟ್ಟು ಮತ್ತೆ ಖರೀದಿ ಮಾಡಿ ಮನೆಯಲ್ಲಿ ಸಾಕಿದ್ದರು. ಈಗ ಈ ಟಗರನ್ನು ಶಿವಮೊಗ್ಗ ಮೂಲದ ಉದ್ಯಮಿ ಜವಾದ್ ಎಂಬುವ ವರಿಗೆ 1.48 ಲಕ್ಷ ರು.ಗೆ ಮಾರಾಟ ಮಾಡಿದ್ದಾರೆ.

ಬಿಸಿಎ ವ್ಯಾಸಂಗ ಮಾಡುತ್ತಿರುವ ಉಲ್ಲಾಸ್ ಗೌಡ ಅವರು ತಮ್ಮ ತಾತ ಹಾಗೂ ತಂದೆ ಮನೋಹರ್ (ಮನು) ಅವರಿಂದ ಕಲಿತ ಕುರಿ ಸಾಕಾಣಿಕೆ ಶಿಕ್ಷಣದ ಜತೆಗೆ ವ್ಯಾಪಾರವಾಗಿ ರೂಢಿಸಿಕೊಂಡಿದ್ದಾರೆ. ಮಾರಾಟವಾದ ಟಗರನ್ನು ವಿಶೇಷ ಕಾಳಜಿಯಿಂದ ನಾಲ್ಕು ತಿಂಗಳ ಕಾಲ ಸಾಕಿದ್ದರು.

ಬಂಡೂರು ಕುರಿ ತನ್ನದೇ ವಿಶೇಷತೆ ಹೊಂದಿದೆ. ಈ ತಳಿ ಟಗರು ಉಳಿದ ಸಾಮಾನ್ಯ ಕುರಿಗಳಿಂದ ವಿಭಿನ್ನವಾಗಿ ಕಾಣಿಸುತ್ತದೆ. ನೋಡಲು ಅತ್ಯಂತ







ಆಕರ್ಷಣೀಯವಾಗಿ ಸಾಮಾನ್ಯ ಕುರಿಗಿಂತ ಗಿಡ್ಡನೆಯ ಕಾಲು, ಉದ್ದವಾದ ದೇಹವನ್ನು ಹೊಂದಿದೆ. ಬಂಡೂರು ಕುರಿ ಮಾಂಸ ಸಾಮಾನ್ಯ ಕುರಿ ಹಾಗೂ ಮೇಕೆಗಳಿಗಿಂತ ಅತ್ಯುತ್ತಮ ರುಚಿ ನೀಡಲಿದೆ.

ಇದರ ಮಾಂಸ ಮಾರಾಟ ತೀರ ಅಪರೂವಾಗಿದೆ. ಈ ತಳಿ ಕುರಿಗಳು ಇರುವುದು ಬೆರಳೆಣಿಕೆಯಷ್ಟು ಮಾತ್ರ. ಹೀಗಾಗಿ ಮನೋಹರ್ (ಮನು) ಹಳ್ಳಿಗಳನ್ನು ಸುತ್ತಿ ಬಂಡೂರು ತಳಿಯನ್ನು ಹುಡುಕಿಗೆ ಸಾಕಾಣಿಕೆ ಮಾಡುತ್ತಿದ್ದಾರೆ. ಅತಿ ಹೆಚ್ಚು ಬೆಲೆಗೆ ಮಾರಾಟವಾದ ಟಗರಿಗೆ ವಿಶೇಷ ಪೂಜೆ ಮಾಡಿ ಮೆರವಣಿಗೆ ಮೂಲಕ ಉಲ್ಲಾಸ್ ಗೌಡ ಕುಟುಂಬಸ್ಥರು ಜವಾದ್ ಅವರಿಗೆ ಹಸ್ತಾಂತ ರಿಸಿದರು. ಸುತ್ತಮುತ್ತಲ ಹತ್ತಾರು ಗ್ರಾಮ ಗಳ ಹಲವು ಮಂದಿ ವಿಶೇಷ ಟಗರನ್ನು ನೋಡಲು ಮುಗಿಬಿದ್ದರು.

ಟಗರ್‌ಖರೀದಿ ಮಾಡಿದ ಜವಾದ್ ಮಾತನಾಡಿ, ಇಲ್ಲಿಯಿಂದಲೇ ಸುಮಾರು 30 ಕುರಿಗಳನ್ನು ಖರೀದಿ ಮಾಡಿದ್ದೇನೆ. ಈ ಟಗರಿನ ಮೂಲಕ ಬಂಡೂರು ತಳಿ ಅಭಿವೃದ್ಧಿಗೆ ಯೋಜನೆ ರೂಪಿಸಿದ್ದೇವೆ ಎಂದರು.

ಉಲ್ಲಾಸ್ ಗೌಡ ಮಾತನಾಡಿ, ನಮ್ಮ ತಾತ ಕುರಿ ಸಾಕುತ್ತಿದ್ದರು. ಅವರಂತೆ ತಂದೆ ಸಹ ಕುರಿ ಸಾಕಾಣಿಕೆ ಮಾಡುತ್ತಿದ್ದಾರೆ. ನನಗೂ ಸಹ ಆಸಕ್ತಿ ಮೂಡಿ ತಂದೆ ಜೊತೆ ಕುರಿ ವ್ಯಾಪಾರದಲ್ಲಿ ತೊಡಗಿಸಿಕೊಂಡಿದ್ದೇನೆ. ನಗರ ಪ್ರದೇಶಗಳಿಗೆ ಹೋಗಿ ಸಂಬಳಕ್ಕೆ ದುಡಿಯುವ ಬದಲು ಹಳ್ಳಿಯಲ್ಲಿಯೇ ನೆಮ್ಮದಿ ಬದುಕು ಸಾಗಿಸುವ ಕನಸು ಕಂಡಿರುವೆ ಎಂದರು.

ಕುರಿ ಸಾಕಾಣಿಕೆ ತಮ್ಮ ಜೀವನಾಧಾರವಾಗಿದೆ. ಕುರಿ ಸಾಕುವುದನ್ನು ಕೀಳಾಗಿ ಕಾಣುವ ಸಮಾಜದಲ್ಲಿ ಮಗ ಸಣ್ಣವಯಸ್ಸಿನಲ್ಲಿಯೇ ಓದಿನ ಜತೆಗೆ ಆದಾಯಕ್ಕೆ ವೃತ್ತಿ ಆರಂಭಿಸುತ್ತಿರುವುದು ಒಳ್ಳೆಯ ಬೆಳವಣಿಗೆ ಎಂದು ಉಲ್ಲಾಸ್ ತಂದೆ ಮನೋಹರ್ ಹೇಳಿದರು.